ಎಮ್.ವಿ.ಸಿ. ನಂ‌ಃ 1306 /2024
ಪಿ.ಡಬ್ಲ್ಯೂಃ1,

**ದಿನಾಂಕ : 23-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ . ಎ.ಎಮ್. ವಾಯ. ಎದರುದಾರ ಪರ ವಕೀಲರಿಂದ**

ನಾನು ಶಾಲೆ ಕಲಿತಿಲ್ಲಾ, ಹಸನಸಾಬ ನನ್ನ ಮಗ, ಯಾಸ್ಮಿನ ನನ್ನ ಅಕ್ಕನ ಸೊಸೆ. ಹಸನಸಾಬ ಗಾಡಿ ನಡೆಸುತ್ತಾನೆ ಮತ್ತು ಊರಲ್ಲಿ ಒಕ್ಕಲುತನ ಮಾಡುತ್ತಾರೆ. ನಾನು, ಹಸನಸಾಬ ಮತ್ತು ಯಾಸ್ಮಿನ ಮೂರು ಜನ ಮೋಟಾರ ಸೈಕಲ ಮೇಲೆ ಗೋಲಗೇರಿಗೆ ಹೋರಟಿದ್ದೇವು. ದೂರನ್ನು ನಾನೇ ನೀಡಿದ್ದೇನೆ. ನಿಪಿ-2 ರಲ್ಲಿ ನಾನು ನಾನು, ಹಸನಸಾಬ ಮತ್ತು ಯಾಸ್ಮಿನ ಮೂರು ಜನ ಮೋಟಾರ ಸೈಕಲ ಮೇಲೆ ಗೋಲಗೇರಿಗೆ ಹೋರಟಿದ್ದೇವು ಅಂತಾ ಬರೆಯಲಾಗಿದೆ ಎಂದರೆ ಸರಿ. ನನ್ನ ಅರ್ಜಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು, ಹಸನಸಾಬ ಮತ್ತು ಯಾಸ್ಮಿನ ಮೂರು ಜನ ಮೋಟಾರ ಸೈಕಲ ಮೇಲೆ ಗೋಲಗೇರಿಗೆ ಹೋರಟಿದ್ದೇವು ಎಂದು ಬರೆಯಲಾಗಿದೆ ಎಂದರೆ ಸರಿ. ಈಗಲೂ ನಾನು ಮನೆ ಕೆಲಸ ಮತ್ತು ಹೊಲದ ಕೆಲಸ ಮಾಡುತ್ತೇನೆ ಎಂದರೆ ಸರಿ. ಯಾಸ್ಮೀನ ಇವರಿಗೆ ಕಾಲಿಗೆ ಪೆಟ್ಟಾದ ಕಾರಣ ಅವರು ಮನೆಯಲ್ಲಿದ್ದಾರೆ. ನಾನು ಸ್ವಂತ ಜಮೀನು ಮಾಡುತ್ತೇವೆ ಮತ್ತು ಬೇರೆಯವರ ಜಮೀನು ಸಹ ಮಾಡುತ್ತೇವೆ. ನಾನು ವರ್ಷಕ್ಕೆ ರೂ. 2,50,000/- ಆದಾಯ ಇದೆ ಎಂದು ದಾಖಲೆ ಸಲ್ಲಿಸಿಲ್ಲಾ. ನನ್ನ ವಯಸ್ಸು 54 ಇದೆ. ನಾನು ವರ್ಷಕ್ಕೆ ರೂ.2,50,000/- ಆದಾಯ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಆರೋಗ್ಯವಾಗಿ ಇದ್ದು ನನ್ನ ಕೆಲಸ ಮಾಡಿಕೊಂಡು ಹೋಗುತ್ತಿದ್ದೇನೆ ಈಗ ಆರಾಮ ಇಲ್ಲಾ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಮೋಟಾರ ಸೈಕಲ ನಂಬರ ಹೇಳಲು ಆಗುವುದಿಲ್ಲಾ.

**ಎಮ್.ವಿ.ಸಿ. ನಂಃ 1306 /2024**
**ಪಿ.ಡಬ್ಲ್ಯೂಃ1,**

ಹಸನಸಾಬ ಇವರ ತಪ್ಪಿನಿಂದ ನಾವು ಮೋಟಾರ ಸೈಕಲ ಮೇಲಿಂದ ಬಿದ್ದಿದ್ದೇವೆ ಎಂದರೆ ಸರಿಯಲ್ಲ. ನಮಗೆ ಪರಿಹಾರ ಸಿಗುವುದಿಲ್ಲ ಎಂದು ಕಾರ ನಂಬರ ಕೆ.ಎ-33-ಎಮ್-4568 ರ ಮೇಲೆ ಸುಳ್ಳೂ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ . ಈ ಕೇಸಿನ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**